ಹಾರುತ್ತಿದ್ದಳು. ಒಡಿಯಾ ಹಿಂದಿ ಸೇರಿಸಿ, "ಗಂಡಸರ ಸಮೀಪಕ್ಕೂ ನಾನು ಹೋಗಲ್ಲ ದೀದಿ. ಬರೀ ಗಂಡಸರಿದ್ದ ಮನೆಗೆ ಕೆಲಸಕ್ಕೇ ಹೋಗಲ್ಲ. ಏಕೆಂದರೆ, ಎಂತೆಂಥ ಗಂಡಸರಿರುತ್ತಾರೆ ಗೊತ್ತಾ? ನಮ್ಮ ಹುಶಾರಿಯಲ್ಲಿ ನಾವಿರಬೇಕು. ಬಟ್ಟೆ ಮುಳ್ಳಿನ ಮೇಲೆ ಬಿದ್ದರೂ ಮುಳ್ಳು ಬಟ್ಟೆಯ ಮೇಲೆ ಬಿದ್ದರೂ ಹರಿಯುವುದು ಬಟ್ಟೆಯೇ" ಎನ್ನುವ ಅನುಭವ ವಚನವನ್ನು ನನ್ನ ಪತಿ ಮತ್ತು ಮಗನ ಮುಂದೆಯೇ ಹೇಳಿದಾಗ ಮೂವರೂ ದಂಗಾಗಿದ್ದೆವು. ನಗಬೇಕೋ ಅಳಬೇಕೋ ತಿಳಿಯದ ಸಂದಿಗ್ಧ ಪರಿಸ್ಥಿತಿ. ಅವಳು ಹೇಳಿದ್ದು ನಿಜವಾದರೂ ಎಲ್ಲರಿಗೂ ಅನ್ವಯಿಸುವುದು ಸರಿಯಲ್ಲವಲ್ಲ. ಅವಳು ಕಸ ಗುಡಿಸಲು ಒರೆಸಲು ಮನೆಯೊಳಗೆ ಬಂದರೆ ಅವರಿಬ್ಬರೂ ಹೊರಗೆ ಹೋಗಬೇಕಿತ್ತು. "ಹೊರಗೆ ಹೋದರೆ ಕೊರೊನಾ ಕಾಟ. ಒಳಗಿರಲು ಇವಳ ಕಾಟ" ಎಂದು ಬೈದುಕೊಳ್ಳುತ್ತಾ ಅವಳ ಕೆಲಸ ಮುಗಿಯುವವರೆಗೂ ಇಬ್ಬರೂ ಬಾಲ್ಕನಿಯಲ್ಲಿ ಕೂತಿರುತ್ತಿದ್ದರು.

ಇಡೀ ಬೆಳಗು... ಮಧ್ಯಾಹ್ನವನ್ನೆಲ್ಲ ಕೆಲಸ ಮಾಡುತ್ತಾ... ಕಂದಿದ ಮುಖ ಹೊತ್ತು, ಹಳೆಯ ನೈಟಿಯಲ್ಲಿ ಕಳೆಯುವ ನಂದಿನಿ ಸಂಜೆ ರೂಪಾಂತರ ಹೊಂದಿದ ಚಿಟ್ಟೆಯಂತಿರುತ್ತಿದ್ದಳು. ಒಳ್ಳೆಯ ಚೂಡಿದಾರ್ ತೊಟ್ಟು... ಕೈತುಂಬಾ ಬಳೆ, ದೊಡ್ಡ ಬಿಂದಿ, ಬೈತಲೆಯಲ್ಲಿ ಸಿಂಧೂರ, ತುಟಿಗೆ ಲಿಪ್‌ಸ್ಟಿಕ್ ಬಳಿದು ಸಿಂಗಾರವಾಗಿ ಟಿವಿ ನೋಡುತ್ತ ಕುಳಿತಿರುತ್ತಿದ್ದಳು. ಸಂಜೆ ಯಾರೇ ಕೆಲಸಕ್ಕೆ ಕರೆದರೂ ಬರುತ್ತಿರಲಿಲ್ಲ. ತಮ್ಮ ಮನೆಯಲ್ಲೂ ಅಷ್ಟೆ. ಒಮ್ಮೆ ಮೆತ್ತಗೆ ನನ್ನ ಬಳಿ, "ದೀದಿ ಪ್ರತಿ ತಿಂಗಳೂ ಐನೂರು ರೂಪಾಯಿ ಹಿಡಿದುಕೊಳ್ಳುತ್ತಾರೆ... ಲಾಲಿ, ಸಿಂಧೂರ, ಚೂಡಿಗೆಂದು... ನಾನಾದರೂ ಯಾಕೆ ಬಿಡಲಿ? ಎಲ್ಲ ಮೆತ್ತಿಕೊಂಡೇ ಕುಳಿತುಕೊಳ್ಳುತ್ತೇನೆ" ಎಂದಾಗ ನಗು ಬಂದಿತ್ತು.

ನಂದಿನಿಗೆ ಕಾಲಿನ ತೊಂದರೆಯಾದದ್ದೊಂದು ಘಟನೆಯೇ ಆಯಿತು. "ಹೊಸ ಊರಿಗೆ ಬಂದದ್ದೊಂದೇ ಆಯಿತು. ಊರು ನೋಡಲೇ ಇಲ್ಲ" ಎಂದು ಗೊಣಗಲಾರಂಭಿಸಿದಳಂತೆ. ಅದಕ್ಕೆ ಒಂದೆರೆಡು ದಿನ ಬೆಂಗಳೂರು ಸುತ್ತಿಸಿದರು. ಆಗ ಕಿರುಬೆರಳಿಗೆ ಏನೋ ತಾಗಿ ಕಾಲಿಗೆ ತೊಂದರೆಯಾಗಿತ್ತು. ಕೆಲಸ ಬಿಟ್ಟು 'ನೋವು... ನೋವು...' ಎಂದು ಮುಖ ಹಿಂಡುತ್ತ ಕುಳಿತಳು. "ಡಾಕ್ಟರ್ ಬಳಿ ಹೋಗೋಣ" ಎಂದಾಗ ದೊಡ್ಡ ಗಲಾಟೆ. ಅವಳು ಬರಲು ಸುತಾರಾಂ ತಯಾರಿಲ್ಲ. ನಾನೂ ಮಧ್ಯಸ್ತಿಕೆಗೆ ಹೋಗಿದ್ದೆ. "ನನಗೆ ಡಾಕ್ಟರ್ ಅಂದ್ರೆ ಭಯ. ಸೂಜಿ ಹಾಕ್ತಾರೆ. ನಾನು ಹುಟ್ಟಿದಾಗಿನಿಂದ ಈವರೆಗೆ ಡಾಕ್ಟರ್ ಬಳಿ ಹೋಗಿಲ್ಲ. ಎರಡೂ ಹೆರಿಗೆಗಳನ್ನೂ ಸೂಲಗಿತ್ತಿಯರೇ ಮನೆಯಲ್ಲಿ ಮಾಡಿದರು" ಎಂದು ಅಳಲಾರಂಭಿಸಿದಳು. ಹಾಗೂ ಹೀಗೂ ತಿಳಿಹೇಳಿ ಒಪ್ಪಿಸಿದ ಅನಂತರ, "ಅವರು ದುಡ್ಡು ಜಾಸ್ತಿ ತೆಗೆದುಕೊಳ್ತಾರೆ. ನನ್ನ ಬಳಿ ಇಲ್ಲ" ಎಂದು ಅತ್ತದ್ದಾಯಿತು. "ದುಡ್ಡಿನ ಯೋಚನೆ ಬಿಡು. ನಾನೇ ಕೊಡ್ತೇನೆ" ಎಂದ ಮೇಲೆ ಬಂದಳು. ಡಾಕ್ಟರ್ 'ಹೇರ್ ಕ್ರಾಕ್' ಆಗಿದೆಯೆಂದು ಪ್ಲಾಸ್ಟರ್ ಹಾಕಿದರು. ಉದ್ದಕ್ಕೂ ಸೋಫಾದ ಮೇಲೆ ಪ್ಲಾಸ್ಟರ್ ಹಾಕಿದ ಕಾಲು ನೀಡಿ ಕುಳಿತು ಟಿವಿ ನೋಡುತ್ತಾ... ಊಟ ಮಾಡುತ್ತಾ, "ಅಂತೂ ಜೀವನದಲ್ಲಿ ಒಮ್ಮೆಯಾದರೂ ನನಗೆ ರಾಜಯೋಗ ಬಂತು" ಎಂದು ನನ್ನತ್ತ ನೋಡುತ್ತ ಕಣ್ಣು ಮಿಟುಕಿಸಿ ನಕ್ಕಿದ್ದಳು. ನಮಗೆ ನಗಬೇಕೋ ಅಳಬೇಕೋ ತಿಳಿಯದ ಸ್ಥಿತಿ.

ನಂದಿನಿ ಒಡಿಶಾಕ್ಕೆ ಮರಳುವುದೂ ಕಷ್ಟವೇ ಆಯಿತು. ಅವಳನ್ನು ಕರೆದೊಯ್ಯಲು ಅವಳಮ್ಮನಿಗೆ ತಿಳಿಸಿದರೂ ಅವರಿಂದ ಸರಿಯಾದ ಪ್ರತಿಕ್ರಿಯೆ ಇಲ್ಲ. ನಂದಿನಿ ಭೇಟಿಯಾದಾಗಲೊಮ್ಮೆ, "ಅಮ್ಮ ಮತ್ತು ಅಣ್ಣ ನನ್ನನ್ನು ಕರೆದೊಯ್ಯಲು ಮುಂದಿನ ತಿಂಗಳು ಬರುತ್ತಿದ್ದಾರೆ. ನನಗೆ ಹಳೆಯ ಸೀರೆಗಳನ್ನು ಕೊಡಿ. ಅಲ್ಲಿ ನಾನಷ್ಟೇ ಅಲ್ಲ... ಅಮ್ಮ, ತಂಗಿಯರೂ ಉಪಯೋಗಿಸುತ್ತಾರೆ" ಎಂದು ಸಂತೋಷದಿಂದಲೇ ಹೇಳಿದಳು. ತಿಂಗಳು ಮುಗಿದ ಮೇಲೆ ಸಂಬಳವನ್ನು ನಂದಿನಿಗೆ ತೋರಿಸಿ ಪ್ರಿಯಂವದಾರ ಕೈಯಲ್ಲಿ ಕೊಟ್ಟಿದ್ದೆ. "ಚೆನ್ನಾಗಿ ಕೊಟ್ಟಿದ್ದಾರೆ. ಅವರಿಗೆ ನಮಸ್ಕಾರ ಮಾಡಿ